(ಇಂದು ದಿನಾಂಕಃ **16-02-2023** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಶ್ರೀ ವಿ ಟಿ ಕೆ ವಕೀಲರಿಂದ:**

ಸರ್ವೇ ನಂಃ 123 ಮತ್ತು 23 ರ ಜಮೀನಿನ ಮೇಲೆ ಕೆ ವಿ ಜಿ ಬ್ಯಾಂಕಿನ ಅರೇಕುರಹಟ್ಟಿ ಬ್ಯಾಂಚ ಭೋಜ ಇದೆ ಎಂದರೆ ಸರಿಯಲ್ಲ. ನನಗೆ ವಾದಿಗಳ ಬಗ್ಗೆ ವಕೀಲರಿಂದ ಮಾಹಿತಿಯನ್ನು ತಿಳಿದುಕೊಂಡಿಲ್ಲ. ಸರ್ವೇ ನಂಃ 123 ಮತ್ತು 23 ರ ಜಮೀನಿನ ಮೇಲೆ ವಿ ಎಸ್ ಎಸ್ ಸೊಸೈಟಿಯ ಭೋಜ ಇದೆ ಎಂದರೆ ಸರಿಯಲ್ಲ. ಪಹಣಿಗಳಲ್ಲಿ ಭೋಜ ತೋರಿಸಿರುವ ಬಗ್ಗೆ ನಾನೇನು ಅದು ಸರಿಯೋ ತಪ್ಪೋ ಎಂದು ನಾನು ವಿಚಾರಣೆ ಮಾಡಿಲ್ಲ. ನನ್ನ ತಂದೆ ಏನು ಆ ರೀತಿ ಸಾಲ ಮಾಡಿಲ್ಲ ಆ ಬಗ್ಗೆ ಅಸಲರ್ಜಿಯಲ್ಲಿ ಬರೆದಿಲ್ಲ . 15,31,653/- ಸರ್ವೇ ನಂಃ 123 ರ ಜಮೀನಿನ ಮೇಲೆ, 4,90,168/- ಸರ್ವೇ ನಂಃ 23 ರ ಜಮೀನಿನ ಮೇಲೆ ಸಾಲ ಬಾಕಿ ಇದೆ ಮತ್ತು ಆ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧ ಪಟ್ಟ ಬ್ಯಾಂಕಿನವರು ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಬ್ಯಾಂಕಿಗೆ ಹೋಗಿ ರೆವಿನ್ಯೂ ದಾಖಲೆಯಲ್ಲಿ ಭೋಜ ಇದ್ದ ಬಗ್ಗೆ ವಿಚಾರಿಸಿಲ್ಲ . ನಾನು ಸೊಸೈಟಿಗೆ ಹೋಗಿ ರೆವಿನ್ಯೂ ದಾಖಲೆಯಲ್ಲಿ ಭೋಜ ಇದ್ದ ಬಗ್ಗೆ ವಿಚಾರಿಸಿಲ್ಲ . ಸಾಲ ಇರುವ ವಿಚಾರ ಗೊತ್ತಿದ್ದರು ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ .

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ

ನವಲಗುಂದ.